**ಓ.ಎಸ್. 214/2020 ಪಿ.ಡಬ್ಲೂ-1 ಹೆಸರು – ಕಮಲಮ್ಮ**

**ಸಾಕ್ಷಿಯನ್ನು ದಿನಾಂಕಃ 02.04.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಬಿ.ವೈ ವಕೀಲರಿಂದಃ**

ದಾಸನೂರು ಮಾದೇಗೌಡ ನನ್ನ ತಂದೆ ಎಂದರೆ ಸರಿ. ಕಟ್ಟವಾಡಿ ಗ್ರಾಮಕ್ಕೆ ನನ್ನನ್ನು ಮದುವೆ ಮಾಡಿ ಕೊಟ್ಟಿದ್ದಾರೆ ಎಂದರೆ ಸರಿ. ನನ್ನ ಪತಿ ಮರಣ ಹೊಂದಿದ ನಂತರ ನಾನು ನನ್ನ ತವರು ಮನೆಯಲ್ಲೇ ವಾಸವಾಗಿದ್ದೇನೆ ಎಂದರೆ ಸರಿ. ದಾವಾ ಸ್ವತ್ತು ನನಗೆ ಮರಣ ಶಾಸನದ ಮೂಲಕ ಬಂದಿದೆ ಎಂದರೆ ಸರಿ. ನಾನು 5 ನೇ ತರಗತಿಯವರೆಗೆ ವ್ಯಾಸಾಂಗ ಮಾಡಿರುತ್ತೇನೆ. ನಾನು ಪ್ರಾರಂಭದಲ್ಲಿ ಇಂಗ್ಲೀಷ್ ನಲ್ಲಿ ಸಹಿ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಹೆಬ್ಬೆಟ್ಟು ಗುರುತನ್ನು ಮಾಡುತ್ತಿರಲಿಲ್ಲ. ನನ್ನ ಪೂರ್ಣ ಹೆಸರು ಎಂ. ಕಮಲಮ್ಮ ಎಂದರೆ ಸರಿ. ಕ್ರಯದ ಕರಾರನ್ನು ಮಾಡಲು ನನ್ನ ತಂದೆ ಛಾಪಾ ಕಾಗದವನ್ನು ತಂದು ಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಕ್ರಯದ ಕರಾರನ್ನು ಸುಂದರಪ್ಪ ಎಂಬುವವರು ಬರವಣಿಗೆ ಮಾಡಿದ್ದು ಅದಕ್ಕೆ ನಮ್ಮ ತಂದೆ ಸಹಿ ಮಾಡಿದ್ದು ನಾನು ಸಹ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಕರಾರಿಗೆ ಬಸಪ್ಪ ಮತ್ತು ಮರಿಸ್ವಾಮಿ ಎಂಬುವವರು ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಕರಾರು ಆದಾಗಿನಿಂದಲೂ ದಾವಾ ಸ್ವತ್ತು ಪ್ರತಿವಾದಿಗಳ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ.

**ಪ್ರಸ್ತುತ ಪ್ರಕರಣದ ಮಧ್ಯಂತರ ಅರ್ಜಿ ಸಂಖ್ಯೆ 1 ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ ಸಂಖ್ಯೆ ಎಂ.ಎ 3/2023 ಪ್ರಕರಣದಲ್ಲಿ ನನ್ನ ವಿಚಾರಣೆಯಾಗಿದೆ ಎಂದರೆ ಸರಿ. ಸಾಕ್ಷಿಗೆ ಸದರಿ ವಿಚಾರಣೆಯ ಪ್ರಮಾಣ ಪತ್ರವನ್ನು ತೋರಿಸಲಾಗಿ ಸಾಕ್ಷಿ ಅದನ್ನು ಒಪ್ಪಿದ ಮೇರೆಗೆ ಅದನ್ನು ನಿ.ಡಿ. 1 ಎಂದು ಗುರುತಿಸಲಾಯಿತು.**

ನಾವು ಬರೆದುಕೊಟ್ಟಿರುವ ಕರಾರಿನ ಮೇಲೆ ದಾವಾ ಸ್ವತ್ತು ಪ್ರತಿವಾದಿಗಳ ಸ್ವಾಧೀನದಲ್ಲಿದೆ ಎಂದರೆ ಸರಿಯಲ್ಲ. ಇತ್ತೀಚೆಗೆ ಜಮೀನುಗಳ ಬೆಲೆ ಹೆಚ್ಚಾಗಿರುವುದರಿಂದ ದಾವಾ ಸ್ವತ್ತು ಕೈ ತಪ್ಪಿ ಹೋಗುತ್ತದೆ ಎಂಬ ಕಾರಣಕ್ಕೆ ಪ್ರತಿವಾದಿಗಳ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಆಜು-ಬಾಜುದಾರರೊಂದಿಗೆ ಅನ್ಯೋನ್ಯವಾಗಿದ್ದೇನೆ ಎಂದರೆ ಸರಿ.

**ಮರುವಿಚಾರಣೆಃ ಇಲ್ಲ**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,**

**ನಂಜನಗೂಡು**